# ಆರೋಗಣೆಯ ಮಾಡೋ ಎನ್ನಯ್ಯ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 123.
2. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 252.
3. **Note:** This song is not available in the books of Prof. S.K. Ramachandra Rao and also in the books of Sri. Pavanje Guru Rao and also in the books of Gorebala Hanumantha Rayaru.
4. **Note:** * These lines are not available in the above referred book. As per that author, these lines are not available in original script (moola prati).
5. **Note:** Lyrics given here are as per Ref. 1. The wordings in Ref. 2 are same as in Ref. 1.

ರಾಗ: ಕಲ್ಯಾಣಿ ತಾಳ: ಅಟ

ಆರೋಗಣೆಯ ಮಾಡೋ ಎನ್ನಯ್ಯ
ಆರೋಗಣೆಯ ಮಾಡೋ ॥ ಪ ॥

ನಾರದರ್ಚಿತ ಪಾದ – ನಾರಾಯಣ ಸ್ವಾಮೀ ॥ ಅಪ ॥

ಸರಸಿಜಲಾಯೆ ಲಕ್ಷ್ಮೀ ಸರಸ್ವತಿ ಭಾರತಿ
ಪರಿಪರಿ ಅಡಿಗೆಯ ಸಿದ್ಧಮಾಡಿಹರೊ
ಪರಿಮಿತಿಯಿಲ್ಲದ ರುಚಿಯ ಪದಾರ್ಥವ
ಪರಮ ಪುರುಷ ಉಂಡು ದಯೆಮಾಡೋ ಸ್ವಾಮೀ ॥ 1 ॥

ಅಂಬುಜಮುಖ ಲಕ್ಷ್ಮೀ ತಾಂಬೂಲ ಕೊಡುವಳು
ಕಂಬುಕಂಧರನೇ ನೀ ಕೈಕೋಳು ಬೇಗ
ರಂಭೆ ಊರ್ವಶಿ ಮೇನಕೆ ಮೊದಲಾದವರು
ಸಂಭ್ರಮದಿ ಬಂದು ನಾಟ್ಯಕೆ ಕಾದಿಹರೊ ಸ್ವಾಮೀ ॥ 2 ॥

........................................................................................ *

........................................................................................ *

ಸರಸಿಜಭವನಯ್ಯಾ ಪುರಂದರ ವಿಠ್ಠಲ

ಸರುವ ಭೋಗ ಭುಂಜಿಪ ನರರ ಪಾಲಿಸೊ ದೇವಾ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಗದುಗಿನ (ಧಾರವಾಡ ಜಿಲ್ಲೆಯಲ್ಲಿರುವ ಊರು) ಶ್ರೀ ವೀರನಾರಾಯಣನ ಸನ್ನಿಧಿಯಲ್ಲಿ ಶ್ರೀ ಪುರಂದರ ದಾಸರು ಈ ಹಾಡನ್ನು ರಚಿಸಿರಬೇಕೆಂದು ಹೇಳುತ್ತಾರೆ. ಎಂದಿನಂತೆ ಸಂಚಾರ ಮಾಡುತ್ತಾ ಮಾಡುತ್ತಾ ಶ್ರೀ ಪುರಂದರ ದಾಸರು ಬರುತ್ತಾರೆ. ಅಂದು ಏಕಾದಶಿ. ಉಪವಾಸ ಜಾಗರಣೆ ಮುಗಿಸಿದ ದಾಸರು ಬೆಳಗಿನ ಪಾರಣೆಗೆಗೆ ಶ್ರೀ ವೀರನಾರಾಯಣನನ್ನು ಈ ರೀತಿ ಎಬ್ಬಿಸುತ್ತಾರೆ....

**ಆರೋಗಣೆಯ ಮಾಡು** – ಊಟಮಾಡು.

**Classification:** Keerthane
**Ankita:** purandara vittala
**Location:** Gadag, Near Hubli in Karnataka State. The presiding deity here is Gadugina Veera Narayana.
**Category:** Pooja Tatva,
**Sub-Category:** oota, narada, archane, aduge, daya, Lakshmi, tambula, kai, jana, gadag,
**Pravachana:** NA
**Explanation:** NA